# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-9 ಚಾಸಾ-41)

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ದಿಃ 07.07.2022

| | | |
|---|---|---|
| ಸಾಕ್ಷಿದಾರರ ಹೆಸರು | - | ಶಿವಣ್ಣ, |
| ತಂದೆಯ ಹೆಸರು | - | ನಾರಾಯಣಪ್ಪ, |
| ವಯಸ್ಸು | - | 45 ವರ್ಷ, |
| ಉದ್ಯೋಗ | - | ವ್ಯವಸಾಯ, |
| ವಾಸ | - | ವಿಶ್ವನಾಥಪುರ. |

## ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ

1. ಈಗ ತೋರಿಸಲಾದ ಎರಡು ದಾಖಲೆಗಳ ಮೇಲೆ ನನ್ನ ಸಹಿಗಳು ಇವೆ. ಅವುಗಳಿಗೆ 2010 ರಲ್ಲಿ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ನಾನು ಠಾಣೆಯ ಹತ್ತಿರ ಹೋಗುವಾಗ ಡಿವೈಎಸ್ಪಿರವರು ಕರೆಯಿಸಿ ಅವುಗಳಿಗೆ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಗೆ ತೋರಿಸಿದ ಎರಡು ದಾಖಲೆಗಳು ನಿಪಿ-11 ಮತ್ತು 12 ಇದ್ದು ಅವುಗಳ ಮೇಲಿನ ಅವರ ಸಹಿಯನ್ನು ನಿಪಿ-11(ಬಿ) ಮತ್ತು 12(ಬಿ) ಎಂದು ಗುರ್ತಿಸಲಾಯಿತು. ಆಗ ಸಮಯ ಮಧ್ಯಾಹ್ನ ಸುಮಾರು 4 ಘಂಟೆ ಆಗಿತ್ತು. ಅಲ್ಲಿ ಬಟ್ಟೆಗಳನ್ನು ಸುತ್ತಿಟ್ಟಿದ್ದರು. ಅವುಗಳನ್ನು ನನಗೆ ತೋರಿಸಲಿಲ್ಲ. ಕೇವಲ ಸಹಿ ಮಾಡು ಎಂದು ಕೇಳಿದರು. ಠಾಣೆಯಲ್ಲಿ 4 ಮತ್ತು 5 ನೇ ಆರೋಪಿತರನ್ನು ನಾನು ನೋಡಲಿಲ್ಲ. ಅವರು ನಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ. ಈಗ ತೋರಿಸಿದ ಬಟ್ಟೆಗಳು ಠಾಣೆಯಲ್ಲಿ ಇದ್ದವು. ಸಾಕ್ಷಿಗೆ ತೋರಿಸಿದ ಬಟ್ಟೆಗಳು ಮು.ಮಾ-22 ಮತ್ತು 23 ಇರುತ್ತವೆ. ಈಗ ತೋರಿಸಿದ ಮು.ಮಾ-1 ಮತ್ತು 3 ಚಾಕುಗಳನ್ನು ನಾನು ನೋಡಿಲ್ಲ. ಮು.ಮಾ-1, 3, 22 ಮತ್ತು 23 ಇವುಗಳ ಮೇಲಿನ ಸಹಿ ಚೀಟಿಗಳನ್ನು ತೋರಿಸಲಾಗಿ ಸಾಕ್ಷಿದಾರರು ತಮ್ಮ ಸಹಿಗಳನ್ನು ಗುರ್ತಿಸುತ್ತಾರೆ. ಅವುಗಳ ಮೇಲಿನ ಸಾಕ್ಷಿದಾರರ ಸಹಿಯನ್ನು ಮು.ಮಾ-1(ಎ), 3(ಎ), 22(ಬಿ) ಮತ್ತು 23(ಬಿ) ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

2. ದಿಃ12.02.2010 ರಂದು ನನ್ನನ್ನು ಪೋಲಿಸ್ ಠಾಣೆಗೆ ಕರೆಸಿದ ಸಮಯ ರಾತ್ರಿ 10.30 ಘಂಟೆ ಎಂದರೆ ಸರಿಯಲ್ಲ. ಆಗ ಚಾಸಾ-39 ಮತ್ತು 40 ಇವರು ಸಹ ನನ್ನೊಂದಿಗೆ ಇದ್ದರು ಎಂದರೆ ಸರಿಯಲ್ಲ. ಆಗ ಡಿವೈಎಸ್ಪಿರವರು ಠಾಣೆಯಲ್ಲಿದ್ದ ಈಗ ತೋರಿಸಿದ 4 ಮತ್ತು 5 ನೇ ಆರೋಪಿತರು ಇವರನ್ನು ತೋರಿಸಿದರು ಎಂದರೆ ಸರಿಯಲ್ಲ. ನಾನು ಅವರನ್ನು ನೋಡಿದಾಗ ಅವರು ತೊಟ್ಟಿದ್ದ ಶರ್ಟ್ ಗಳು ರಕ್ತ ಆಗಿತ್ತು ಎಂದರೆ ಸರಿಯಲ್ಲ. 5 ನೇ ಆರೋಪಿ ಮುನಿರಾಜು ಮು.ಮಾ-22 ಶರ್ಟ್ ಅನ್ನು ಹಾಗೂ 4 ನೇ ಆರೋಪಿ ಗೋವಿಂದರಾಜು ಈತ ಮು.ಮಾ-23 ಶರ್ಟ್ ಅನ್ನು ಧರಿಸಿದ್ದ ಎಂದರೆ ಸರಿಯಲ್ಲ. ತನಿಖಾಧಿಕಾರಿ ಅವುಗಳನ್ನು ನಮ್ಮ ಸಮಕ್ಷಮ ಅಮಾನತುಪಡಿಸಿಕೊಂಡು ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಯನ್ನು ಅಂಟಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-11 ನ್ನು ಓದಿ ಹೇಳಿದ ನಂತರ ನಾನು ಮತ್ತು ಚಾಸಾ-39 ಹಾಗೂ 40 ಅದಕ್ಕೆ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಒಂದು ಚಾಕು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-11 ಮಹಜರ್ ಅನ್ನು ಮಧ್ಯಾಹ್ನ ಮಾಡಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮರುದಿನ ದಿಃ13.02.2010 ರಂದು ವಿಶ್ವನಾಥಪುರ ಪೋಲಿಸ್ ಠಾಣೆಗೆ ಡಿವೈಎಸ್ಪಿರವರು ನನ್ನನ್ನು, ಚಾಸಾ-39 ಮತ್ತು 40 ಇವರನ್ನು ಮಧ್ಯಾಹ್ನ 4 ಘಂಟೆಗೆ ಪುನಃ ಕರೆಸಿದ್ದರು ಎಂದರೆ ಸರಿಯಲ್ಲ. ಆಗ ಠಾಣೆಯಲ್ಲಿ 4 ಮತ್ತು 5 ನೇ ಆರೋಪಿತರು ಇದ್ದರು ಎಂದರೆ ಸರಿಯಲ್ಲ. ಸದರಿ ಇಬ್ಬರು ಆರೋಪಿತರು ಕೃತ್ಯಕ್ಕೆ ಬಳಸಿದ ಚಾಕುವನ್ನು ತಮ್ಮ ಜೊತೆ ಬಂದರೆ ಹಾಜರುಪಡಿಸುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಆರೋಪಿತರು ಆ ರೀತಿ ಹೇಳಿದ್ದರಿಂದ ಮಹಜರ್ ಮಾಡಲು ತನಿಖಾಧಿಕಾರಿಯವರು ನಮ್ಮನ್ನು ಪಂಚ ಸಾಕ್ಷಿದಾರರಾಗಿ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಇಬ್ಬರು ಆರೋಪಿತರು

ನಮ್ಮನ್ನು ದ್ಯಾವರಹಳ್ಳಿ-ಚಪ್ಪರದಕಲ್ಲು ರಸ್ತೆಯಲ್ಲಿ ಪಕ್ಕ ಇರುವ ಮೋಟಮುನಿಯಪ್ಪ ಇವರ ಜಮೀನಿನ ಪಕ್ಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನಾವು ಹೋದ ಜೀಪನ್ನು ನಿಲ್ಲಿಸುವಂತೆ ತಿಳಿಸಿದರು ಎಂದರೆ ಸರಿಯಲ್ಲ. ನಂತರ 4 ಮತ್ತು 5 ನೇ ಆರೋಪಿತರು ಸದರಿ ಮೋಟಮುನಿಯಪ್ಪನ ಜಮೀನಿನಲ್ಲಿನ ಬಿದಿರು ಪೊದೆಯ ಹತ್ತಿರ ನಮ್ಮನ್ನು ಮತ್ತು ಪೋಲಿಸರನ್ನು ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಸದರಿ ಬಿದಿರು ಪೊದೆ ಸುಮಾರು 13 ಅಡಿ ಸುತ್ತಳತೆಯಷ್ಟು ಅಗಲ ಇದ್ದು ಬಿದಿರಿನ ಮರಗಳು ಸುಮಾರು 8 ರಿಂದ 10 ಅಡಿ ಎತ್ತರ ಇದ್ದವು ಎಂದರೆ ಸರಿಯಲ್ಲ. ಅಲ್ಲಿ 5 ನೇ ಆರೋಪಿ ಬಿದಿರು ಪೊದೆಯೊಳಗೆ ಕೈ ಹಾಕಿ ನನಗೆ ತೋರಿಸಿದ ಮು.ಮಾ-3 ಚಾಕುವನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಆ ಚಾಕುವಿನ ತುದಿಗೆ ರಕ್ತದ ಕಲೆಯಾಗಿತ್ತು ಎಂದರೆ ಸರಿಯಲ್ಲ. 4 ನೇ ಆರೋಪಿ ಸಹ ಅದೇ ಪೊದೆಯಲ್ಲಿ ಕೈ ಹಾಕಿ ನನಗೆ ತೋರಿಸಿದ ಮು.ಮಾ-1 ಚಾಕುವನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಆ ಚಾಕುವಿನ ತುದಿಯಲ್ಲಿಯೂ ಸಹ ರಕ್ತ ಆಗಿತ್ತು ಎಂದರೆ ಸರಿಯಲ್ಲ. ತನಿಖಾಧಿಕಾರಿಯವರು ಎರಡು ಚಾಕುಗಳನ್ನು ಪ್ರತ್ಯೇಕ ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಅವುಗಳನ್ನು ಸೀಲ್ ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ನಂತರ ಪೋಲಿಸರು ಸ್ಥಳದಲ್ಲಿಯೇ ನಿಪಿ-12 ರಂತೆ ಮಹಜರ್ ಮಾಡಿ ಅಲ್ಲೇ ನನ್ನ ಸಹಿಯನ್ನು ಅದಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಮಹಜರ್ ಅನ್ನು ಸಂಜೆ 04.00 ರಿಂದ 05.00 ಘಂಟೆ ಅವಧಿಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಎಸ್ ಎಸ್ ವಕೀಲರಿಂದಃ**

7. ನಿಪಿ-11 ಮತ್ತು 12 ರಲ್ಲಿರುವ ಮಾಹಿತಿ ನನಗಿಲ್ಲ. ಮು.ಮಾ-1, 3, 22 ಮತ್ತು 23 ಇವುಗಳಿಗೆ ನನ್ನ ಸಮಕ್ಷಮ ನನ್ನ ಸಹಿ ಚೀಟಿಗಳನ್ನು ಅಂಟಿಸಿಲ್ಲ ಎಂದರೆ ಸರಿ. ನಮ್ಮೂರಿನಿಂದ ವಿಶ್ವನಾಥಪುರ ಪೋಲಿಸ್ ಠಾಣೆ ಅರ್ಧ ಕಿಮೀ ದೂರದಲ್ಲಿದೆ.

**ಪಾಟೀ ಸವಾಲುಃ** ಉಳಿದ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರುವಿಚಾರಣೆಃ ಇಲ್ಲ

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು